RW-1

ಇಂದು ದಿ.27-11-2024 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣವಚನ ಬೋಧಿಸಲಾಯಿತು.

ಅರ್ಜಿದಾರರ ಪರ ವಕೀಲರು ಸಿವಿಲ್ ಪ್ರಕ್ರಿಯಾ ಸಂಹಿತೆ ಆಜ್ಞೆ-18 ನಿಯಮ-17ರ ಅಡಿಯಲ್ಲಿ ಸಲ್ಲಿಸಿದ ಅರ್ಜಿಯನ್ನು ಪುರಸ್ಕರಿಸಿರುವುದರಿಂದ ಸಾಕ್ಷಿಯ ಪಾಟೀಸವಾಲು ಮಾಡಲು ಮಾನ್ಯ ನ್ಯಾಯಾಲಯವು ಅರ್ಜಿದಾರರ ಪರ ವಕೀಲರಿಂದ ಅನುಮತಿ ನೀಡಲಾಯಿತು.

ಪಾಟೀಸವಾಲುಃ- ಅರ್ಜಿದಾರರ ಪರ ಡಿ.ಜಿ.ಪಿ ರವರಿಂದ.

ಸರ್ವೆ ನಂ.27/3 ಬಿ ಗೆ ಸಂಬಂಧಪಟ್ಟಂತೆ ಅಸಲು ದಾವಾ ನಂ.19/2007 ದಾವೆ ದಾಖಲು ಮಾಡಿದ್ದು , ಅದು ನನ್ನ ಪರವಾಗಿ ಡಿಕ್ರಿಯಾಗಿರುತ್ತದೆ. ಸದರಿ ತೀರ್ಪಿನ ವಿರುದ್ಧ 1ನೇ ಎದುರುದಾರ ಆರ್.ಎ.14/2014 ಮೇಲ್ಮನವಿ ಸಲ್ಲಿಸಿರುತ್ತಾರೆ. ಸದರಿ ಮೇಲ್ಮನವಿಯನ್ನು ಪುರಸ್ಕರಿಸಲಾಗಿದೆ ಎನ್ನುವುದು ಸುಳ್ಳು. ಸದರಿ ತೀರ್ಪಿನ ವಿರುದ್ಧ ನಾವು ಮಾನ್ಯ ಉಚ್ಚನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಿದ್ದೇವೆ. ಸದರಿ ಮೇಲ್ಮನವಿ ಸಲ್ಲಿಸಿದ ದಾಖಲೆಯನ್ನು ನಮ್ಮ ವಕೀಲರಿಗೆ ಕೊಟ್ಟಿದೇನೆ, ನ್ಯಾಯಾಲಯಕ್ಕೆ ಕೊಟ್ಟಿದ್ದಾರೋ ಇಲ್ಲವೋ ಗೊತ್ತಿಲ್ಲ. ಮಾನ್ಯ ಉಚ್ಚನ್ಯಾಯಾಲಯದಲ್ಲಿ ಸಲ್ಲಿಸಿದ ಮೇಲ್ಮನವಿಯ ನಂಬರ್ ನನಗೆ ಗೊತ್ತಿಲ್ಲ.

ಇನ್ನುಳಿದ ಪಾಟೀಸವಾಲನ್ನು1ನೇ ಎದುರುದಾರರ ಪರ ವಕೀಲರು ಮಾಡಿದ ಪಾಟೀಸವಾಲನ್ನು ಅನುಮೋದಿಸಬೇಕೆಂದು ವಿನಂತಿಸಿದ್ದು , ಅನುಮೋದಿಸಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸರಿಯಾಗಿದೆ

ಸಹಿ/-

1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು, ದಾವಣಗೆರೆ.